ದಿನಾಂಕಃ **30.12.2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಃ- ಶ್ರೀ ಎನ್.ಸಿ, ಎದುರುದಾರರ ಪರ ವಕೀಲರಿಂದ .**

ನೀವು ಮನೆ ಬಿಟ್ಟು ಹೋದ ಮೇಲೆ ಕೆಲಸಕ್ಕೆ ಹೋಗುತ್ತಿದ್ದೀರಿ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ನೀವು ಶಾಯಿ ಗಾರ್ಮೆಂಟ್ಸ್ ಗೆ ಕೆಲಸಕ್ಕೆ ಹೋಗುತ್ತಿದ್ದೀರೀ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ನ್ಯಾಯಾಲಯದಿಂದ ಅರ್ಜಿಯನ್ನು ಸಲ್ಲಿಸಿ ಸದರಿ ಶಾಯಿ ಗಾರ್ಮೆಂಟ್ಸ್ ನಿಂದ ದಾಖಲೆಗಳನ್ನು ತರಿಸಿಕೊಳ್ಳಲು ನಿಮ್ಮದೇನು ತಕರಾರು ಇರುವುದಿಲ್ಲವಾ ಎಂದರೆ ಸಾಕ್ಷಿಯು ಇಲ್ಲ ತರಿಸಿಕೊಳ್ಳಬಹುದು ಎಂದು ನುಡಿಯುತ್ತಾರೆ.

ನೀವು ಹುಟ್ಟಿದಾಗಿನಿಂದಲೂ ಅಂಗವಿಕಲರು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಿಮ್ಮ ಹಾಗೂ ಎದುರುದಾರರ ವಿವಾಹವನ್ನು ಹಿರಿಯರು ನೋಡಿ ನಿಶ್ಚಿಯಿಸಿದ್ದರು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನೀವು ಅಂಗವಿಕಲರು ಎಂದು ಗೊತ್ತಿದ್ದರು ಎದುರುದಾರರು ನಿಮ್ಮನ್ನು ವಿವಾಹ ಆಗಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಎದುರುದಾರರು ಮೂಲಭೂತ ಅವಶ್ಯಕತೆಗಳಿಗೆ ಹಾಗೂ ವೈದ್ಯಕೀಯ ಖರ್ಚುಗಳಿಗೆ ಹಣವನ್ನು ಕೊಡುತ್ತಿರಲಿಲ್ಲ ಎಂದು ಹೇಳಿದ್ದು ಆ ಸಂಬಂಧ ದೂರನ್ನು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಎದುರುದಾರರು ನಿಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಹಾಗೂ ಮೂಲಭೂತ ಅವಶ್ಯಕತೆಗಳಿಗೆ ಹಾಗೂ ವೈದ್ಯಕೀಯ ಖರ್ಚುಗಳಿಗೆ ಹಣವನ್ನು ಕೊಡುತ್ತಿದ್ದರು ನೀವು ಸುಳ್ಳು ಹೇಳುತ್ತಿದ್ದೀರೀ ಎಂದರೆ ಸಾಕ್ಷಿಯು ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮಗೆ ಹಿಂಸೆ

ಕೊಡುತ್ತಿದ್ದರ ಬಗ್ಗೆ ನೀವು ಎಂದಿಗೂ ಎದುರುದಾರರನ್ನು ಹಾಗೂ ಅವರ ತಂದೆಯವರನ್ನು ಕೇಳಿರುವುದಿಲ್ಲ ಎಂದರೆ ಸಾಕ್ಷಿಯು ಅವರು ಜೊತೆಯಲ್ಲಿಯೇ ಇದ್ದರು ಎಂದು ನುಡಿಯುತ್ತಾರೆ. ಈ ಕೇಸಿಗೊಸ್ಕರ ಈ ರೀತಿ ಸೃಷ್ಟಿ ಮಾಡಿಕೊಂಡಿರುತ್ತೀರೀ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ನಿಮ್ಮನ್ನು ಹಾಗೂ ನಿಮ್ಮ ಮಗಳನ್ನು ಮನೆಯಿಂದ ಹೊರಹಾಕುವ ಉದ್ದೇಶ ಎದುರುದಾರರಿಗೆ ಹಾಗೂ ಅವರ ಕುಟುಂಬಕ್ಕೆ ಇದ್ದಿರಲಿಲ್ಲಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ನಿಮಗೂ ಹಾಗೂ ದೊಡ್ಡ ಹೊನ್ನಯ್ಯ ರವರ ನಡುವೆ ಅಕ್ರಮ ಸಂಬಂಧ ಇದ್ದ ಬಗ್ಗೆ ಎದುರುದಾರರಿಗೆ ಗೊತ್ತಾದ ನಂತರ ನೀವೇ ಮನೆಯನ್ನು ಬಿಟ್ಟು ಹೋಗಿರುತ್ತೀರೀ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ.

ನೀವು ಮನೆಯನ್ನು ಬಿಟ್ಟು ಹೋದ ನಂತರ ದಿನಾಂಕ **17.09.2018** ರಂದು ಎದುರುದಾರರು ಪೋಲೀಸ್ ಠಾಣೆಯಲ್ಲಿ ದೂರನ್ನು ಕೊಟ್ಟಿದ್ದರು ಎಂದರೆ ಸಾಕ್ಷಿಯು ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಸದರಿ ದೂರನ್ನು ಕೊಟ್ಟ ನಂತರ ಪೋಲೀಸರು ನಿಮ್ಮನ್ನು ಹಾಗೂ ಎದುರುದಾರರನ್ನು ಕರೆಸಿದ್ದರು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಇಬ್ಬರಿಗೂ ಬುದ್ದಿ ಹೇಳಿ ಚೆನ್ನಾಗಿ ಇರಿ ಎಂದು ಕಳುಹಿಸಿದ್ದರು ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಪೊಲೀಸ್ ಠಾಣೆಯಲ್ಲಿ ಎದುರುದಾರರು ನಿಮ್ಮನ್ನು ಕರೆದುಕೊಂಡು ಹೋಗುತ್ತೇನೆ ಎಂದು ಒಪ್ಪಿದ್ದರೂ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸದರಿ ದೂರನ್ನು ನೀಡಿದ ನಂತರ ಪೋಲೀಸರು ಯಾವುದೇ ದೂರನ್ನು ನೋಂದಾಯಿಸಿದೇ ಹಾಗೂ ಸ್ವೀಕೃತಿಯನ್ನು ನೀಡದೇ

ನಿಮಗೆ ಬುದ್ದಿವಾದ ಹೇಳಿ ಕಳುಹಿಸಿದ್ದರು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಿಮಗೆ ಅಕ್ರಮ ಸಂಬಂಧ ಇದ್ದಿದ್ದರಿಂದ ನೀವು ಪೋಲೀಸರು ಹೇಳಿದರೂ ಎದುರುದಾರರ ಜೊತೆ ಹೋಗಿರುವುದಿಲ್ಲ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಎದುರುದಾರರು ಹಾಗೂ ಅವರ ಕುಟುಂಬದವರು ನಿಮಗೆ ಎಂದೂ ಹಿಂಸೆಯನ್ನು ಕೊಟ್ಟಿರುವುದಿಲ್ಲ ಸುಳ್ಳು ಹೇಳುತ್ತಿದ್ದೀರೀ ಎಂದರೆ ಸಾಕ್ಷಿಯು ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ನಿಮ್ಮ ವಿವಾಹ ಆದ ನಂತರ ತೊರೇಪಾಳ್ಯ ದಲ್ಲಿ ವಾಸ ಇದ್ದಿದ್ದು ಎಂದರೆ ಸಾಕ್ಷಿಯು ಹೌದು **2** ತಿಂಗಳು ಮಾತ್ರ ಎಂದು ನುಡಿಯುತ್ತಾರೆ. ಎದುರುದಾರರು ಮದುವೆ ಆದಾಗ ದಿನಗೂಲಿ ಕೆಲಸ ಮಾಡುತ್ತಿದ್ದರಾ ಎಂದರೆ ಸಾಕ್ಷಿಯು ಇಲ್ಲ ಅಂಗಡಿ ಇಟ್ಟುಕೊಂಡಿದ್ದರು ಎಂದು ನುಡಿಯುತ್ತಾರೆ. ನಿಮ್ಮ ಹಾಗೂ ಎದುರುದಾರರ ಮದುವೆ ಸಿಂಪಲ್ ಆಗಿ ಜರುಗಿರುತ್ತದೆ ಎಂದರೆ ಸಾಕ್ಷಿಯು ಇಲ್ಲ ನನ್ನ ತಂದೆಯವರು ಜೋರಾಗಿ ಮಾಡಿರುತ್ತಾರೆ. ಎದುರುದಾರರು ಹಾಗೂ ನೀವು ಬಡವರಿದ್ದು ಆ ಕಾರಣ ಮದುವೆ ಸಿಂಪಲ್ ಆಗಿರುತ್ತದೆ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಎದುರುದಾರರು ದಿನಗೂಲಿ ಕೆಲಸ ಮಾಡುತ್ತಿದ್ದರಿಂದ ಸದರಿ ಕೆಲಸದಲ್ಲಿ ಮನೆಯನ್ನು ನಿರ್ವಹಿಸಲು ಆಗದೇ ಇದ್ದ ಕಾರಣ ಎದುರುದಾರರು ಬೆಂಗಳೂರಿಗೆ ಕೆಲಸಕ್ಕೆ ಹೋಗಿರುತ್ತಾರೆ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. **2005-2006** ರಲ್ಲಿ ನೀವು ಬೆಂಗಳೂರಿನ ಅಂಜನ ನಗರದಲ್ಲಿ ಬಾಡಿಗೆ ಮನೆಯಲ್ಲಿ ವಾಸ ಇದ್ದಿದ್ದು ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ.

ನಿಮ್ಮ ಯಜಮಾನರು ಕಲ್ಲಿನ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ನಿಮಗೆ ಎಲ್ಲಾ ವಿಷಯ ಗೊತ್ತಿದ್ದರು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳ್ತುದ್ದೀರಿ ಎಂದರೆ ಸಾಕ್ಷಿಯು ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಬೆಂಗಳೂರಿನಲ್ಲಿ ವಾಸ ಇದ್ದಾಗಲೇ ಮಗಳು ಜನಿಸಿದ್ದು ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಬೆಂಗಳೂರಿನಲ್ಲಿ ಜೀವನ ಸಾಗಿಸಲು ಆಗದ ಕಾರಣ ಪುನಃ ತೊರೇಪಾಳ್ಯಕ್ಕೆ ವಾಪಸ್ಸು ಬಂದಿರುತ್ತೀರೀ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಮದುವೆಯಾದ **2** ತಿಂಗಳು ಮಾತ್ರ ಚೆನ್ನಾಗಿ ಇದ್ದು ನಂತರ ಬೇರೆ ವಾಸ ಇದ್ದೇನು ಎಂದು ಹೇಳಿದ್ದು ಎಲ್ಲಿ ವಾಸ ಇದ್ದಿದ್ದು ಎಂದರೆ ಸಾಕ್ಷಿಯು ಮಾಗಡಿಯಲ್ಲಿ ಎಂದು ನುಡಿಯುತ್ತಾರೆ. ತೊರೇಪಾಳ್ಯದಿಂದ ಮಾಗಡಿಯ ನಮ್ಮ ತಾಯಿಯ ಮನೆಯಲ್ಲಿ ವಾಸ ಇದ್ದೇವು ನಂತರ ಬಾಡಿಗೆ ಮನೆಯಲ್ಲಿ ವಾಸ ಇದ್ದೇವು ಎಂದು ನುಡಿಯುತ್ತಾರೆ. ಬಾಡಿಗೆ ಮನೆಯಲ್ಲಿ ಎಷ್ಟು ವರ್ಷಗಳು ಇದ್ದಿದ್ದು ಎಂದರೆ ಸಾಕ್ಷಿಯು **5-6** ತಿಂಗಳು ಎಂದು ನುಡಿಯುತ್ತಾರೆ. ಮಾಗಡಿಯ ಯಾರ ಮನೆಯಲ್ಲಿ ಬಾಡಿಗೆ ಇದ್ದಿದ್ದು ಎಂದರೆ ಸಾಕ್ಷಿಯು ಅವರ ಹೆಸರನ್ನು ಮರೆತಿರುತ್ತೇನೆ ಎಂದು ನುಡಿಯುತ್ತಾರೆ. ಮದುವೆಯಾದ **2** ತಿಂಗಳು ನಂತರ ನೀವು ಬೆಂಗಳೂರಿನಲ್ಲಿ ವಾಸ ಇದ್ದಿದ್ದು, ಮಾಗಡಿಯ ಯಾವುದೇ ಬಾಡಿಗೆ ಮನೆಯಲ್ಲಿ ವಾಸ ಇದ್ದಿರಲಿಲ್ಲ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ.

**2007** ರಲ್ಲಿ ಪುನಃ ನೀವು ತೊರೇಪಾಳ್ಯಕ್ಕೆ ಬಂದಾಗ ಎದುರುದಾರರ ತಂದೆ ತಾಯಿಯವರಿಗೆ ನೀವು ಸರಿಯಾಗಿ ಊಟ ನೀಡುತ್ತಿರಲಿಲ್ಲ ಹಾಗೂ

ಚೆನ್ನಾಗಿ ನೋಡಿಕೊಳ್ಳುತ್ತಿರಲಿಲ್ಲ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಎದುರುದಾರರು ತನ್ನ ತಂದೆ ತಾಯಿಯವರನ್ನು ಚೆನ್ನಾಗಿ ನೋಡಿಕೊ ಎಂದು ನಿಮಗೆ ಹೇಳಿದರೂ ನೀವು ಅವರ ಮಾತನ್ನು ಕೇಳುತ್ತಿರಲ್ಲಿಲ್ಲ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. 2007 ರಲ್ಲಿ ಎದುರುದಾರರು ದಿನ ಗೂಲಿ ಕೆಲಸಕ್ಕೆ ತೊರೆಪಾಳ್ಯದಿಂದ ಮಾಗಡಿಗೆ ಬಂದು ಹೋಗುತ್ತಿದ್ದರು ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಎದುರುದಾರರು ಚಿಕನ್ ಶಾಪ್ ನಲ್ಲಿ ಕೆಲಸ ಮಾಡುತ್ತಿದ್ದರೂ ಎಂದರೆ ಸಾಕ್ಷಿಯು ನಾವೇ ಚಿಕನ್ ಶಾಪ್ ನ್ನು ಇಟ್ಟಿದ್ದೇವು ಎಂದು ನುಡಿಯುತ್ತಾರೆ. 2011 ರಲ್ಲಿ ನೀವು ಎದುರುದಾರರ ತಂದೆ ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳದೇ ಇದ್ದ ಕಾರಣ ಜಗಳ ಬೇಡ ಎಂದು ಹಾಗೂ ಮಕ್ಕಳ ವಿದ್ಯಾಬ್ಯಾಸಕ್ಕಾಗಿ ಎದುರುದಾರರು ಮಾಗಡಿಗೆ ಬಂದಿರುತ್ತಾರೆ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. 2011 ರಲ್ಲಿ ಗುರು ಎಂಬುವವರ ಮನಗೆ ಬಾಡಿಗೆಗೆ ಬಂದಿರುತ್ತಾರೆ ಎಂದರೆ ಸಾಕ್ಷಿಯು ನನಗೆ ನೆನಪು ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಗುರು ರವರನ್ನು ನ್ಯಾಯಾಲಯಕ್ಕೆ ಕರೆಸಿ ಸಾಕ್ಷಿ ಹೇಳಿಸಬಹುದಾ ಎಂದರೆ ಸಾಕ್ಷಿಯು ಕರೆಸಬಹುದು ಎಂದು ನುಡಿಯುತ್ತಾರೆ. ಎದುರುದಾರರು ತಮ್ಮ ಸಂಬಂಧಿಕರಿಂದ ಹಾಗೂ ಸ್ನೇಹಿತರಿಂದ ಸಾಲವನ್ನು ಪಡೆದು ಚಿಕನ್ ಶಾಪ್ ನ್ನು ತೆರೆದಿರುತ್ತಾರೆಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಸದರಿ ಅಂಗಡಿಯನ್ನು ಓಪನ್ ಮಾಡಿದಾಗ ಎದುರುದಾರರಿಗೆ ಸುಮಾರು ರೂ. 4-5 ಲಕ್ಷ ನಷ್ಟ ಆಗಿರುತ್ತದೆ ಎಂದರೆ ಸಾಕ್ಷಿಯು ಸುಳ್ಳು ನುಡಿಯುತ್ತಾರೆ.

ನಿಮ್ಮ ತಂದೆಯವರೇ ಸದರಿ ಚಿಕನ್ ಅಂಗಡಿಯನ್ನು ಹಾಕಿಕೊಟ್ಟಿದ್ದರು ನಿಮ್ಮ ಅರ್ಜಿಯಲ್ಲಿ ಹಾಗೂ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೀರಾ ಎಂದರೆ ಸಾಕ್ಷಿಯು ಬರೆಸಿರುವುದಿಲ್ಲ ಎಂದು ನುಡಿಯುತ್ತಾರೆ. 2011 ರಲ್ಲಿ ಎದುರುದಾರರೇ ಚಿಕನ್ ಅಂಗಡಿಯನ್ನು ತೆರೆದಿದ್ದು, ನೀವು ನಿಮ್ಮ ತಂದೆಯವರೇ ಹಾಕಿ ಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೀರೀ ಎಂದರೆ ಸಾಕ್ಷಿಯು ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಎದುರುದಾರರ ತಂದೆ ತಾಯಿಯವರು ಬಾಡಿಗೆ ಮನಗೆ ಬಂದರೆ ನೀವು ಗಲಾಟೆ ಮಾಡಿ ಅವರನ್ನು ಮನೆಗೆ ಸೇರಿಸುತ್ತಿದ್ದರಲಿಲ್ಲ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ನೀವು ಲಗ್ಝೂರಿಯಾಗಿ ಜೀವನ ನಡೆಸಬೇಕೆಂಬ ಉದ್ದೇಶದಿಂದ ರಾಗಿ ಹಾಗೂ ಧವಸ ದ್ಯಾನ್ಯಗಳನ್ನು ಕಳ್ಳತನ ಮಾಡಿ ಮಾರಾಟ ಮಾಡುತ್ತಿದ್ದೀರೀ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. 2017 ರಲ್ಲಿ ಬಂಗಾರದ ಒಡವೆಗಳನ್ನು ಅಡವಿಟ್ಟುರುತ್ತೀರೀ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ನೀವು ಅಡವಿಟ್ಟುವಿರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರಿದು ಎದುರುದಾರರು ಹೇಳಿದಂತೆ ಅಡವಿಟ್ಟುರುತ್ತೇನೆ ಎಂದು ನುಡಿಯುತ್ತಾರೆ.

ಎದುರುದಾರರು ಚಿಕನ್ ನ್ನು ತೆರೆದಾಗ ಸದರಿ ಸ್ಥಳದಲ್ಲಿ ಸುಮಾರು ಚಿಕನ್ ಅಂಗಡಿಗಳು ಇವೆ ಎಂದರೆ ಸಾಕ್ಷಿಯು 3 ಅಂಗಡಿಗಳು ಇರುತ್ತವೆ ಎಂದು ನುಡಿಯುತ್ತಾರೆ. ಸದರಿ ಚಿಕನ್ ಶಾಪ್ ನಿಂದ ಹೆಚ್ಚು ಆದಾಯ ಬರುವುದಿಲ್ಲ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ತಮಗೆ ಗೊತ್ತಿದ್ದರೂ

ಜೀವನಾಂಶ ಪಡೆಯಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದಿರೀ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ನಿಮ್ಮ ತಾಳಿಯನ್ನು ನೀವು ಅಡಮಾನ ಇಟ್ಟಿದ್ದೀರಿ ಅಡಮಾನ ಇಟ್ಟಿರಲಿಲ್ಲ ಎಂದು ನುಡಿಯುತ್ತಾರೆ. ಎದುರುದಾರರು ಮನಗೆ ಬಂದರೆ ಯಾವಾಗಲೂ ಹಣ ಬೇಕು ಎಂದು ಜಗಳ ಮಾಡುತ್ತಿರೀ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಎದುರುದಾರರಿಗೆ ಗೊತ್ತಾಗದೇ ನೀವು ನಿಮ್ಮ ತಾಯಿಯ ಮನೆಗೆ ಹೋಗುತ್ತಿದ್ದೀರಿ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ.

ದೊಡ್ಡ ಹನುಮಯ್ಯ ಎದುರುದಾರರ ರವರ ದೊಡ್ಡಪ್ಪನವರ ಮಗ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಎದುರುದಾರರು ಚಿಕನ್ ಶಾಪ್ ಗೆ ಹೋದಾಗ ಸದರಿ ದೊಡ್ಡ ಹನುಮಯ್ಯ ನಿಮ್ಮ ಮನೆಗೆ ಬರುತ್ತಿದ್ದರು ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. **2015** ರಲ್ಲಿ ಸದರಿಯವರು ನಿಮ್ಮ ಮನೆಗೆ ಬರುತ್ತಿದ್ದರು ಹಾಗೂ ನಿಮ್ಮ ಜೊತೆ ಮಾತನಾಡುತ್ತಿದ್ದರು ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಎದುರುದಾರರು ಮುಂಜಾನೆ **6.00** ಗಂಟೆಗೆ ಕೆಲಸಕ್ಕೆ ಹೋದರೆ ರಾತ್ರಿ **8.00** ಗಂಟೆಗೆ ಬರುತ್ತಿದ್ದರು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಂತರ ನಾನು ಸಹ ಅವರ ಜೊತೆ ಹೋಗುತ್ತಿದ್ದೇನು ಎಂದು ನುಡಿಯುತ್ತಾರೆ. ಎದುರುದಾರರು ಕೆಲಸಕ್ಕೆ ಹೋದಾಗಲೇ ನೀವು ಹಾಗೂ ಸದರಿ ದೊಡ್ಡ ಹನುಮಯ್ಯ ಅಕ್ರಮ ಸಂಬಂದವನ್ನು ಹೊಂದಿರುತ್ತೀರೀ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. **2011** ರಿಂದ ಇಲ್ಲಿಯವರೆಗೂ ನೀವು ಅಕ್ರಮ ಸಂಬಂಧವನ್ನು ಹೊಂದಿರುತ್ತೀರೀ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ.

ಎದುರುದಾರರು ಕೆಲಸಕ್ಕೆ ಹೋದಾಗ ನೀವು ಹಾಗೂ ಸದರಿ ದೊಡ್ಡ ಹನುಮಯ್ಯ ನವರು ಬೈಕ್ ನಲ್ಲಿ ಹೊರಗಡೆ ತಿರುಗಾಡಲು ಹೋಗುತ್ತಿದ್ದೀರೀ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ನಿಮ್ಮ ಅಕ್ರಮ ಸಂಬಂಧದಿಂದ ನಿಮ್ಮ ಮಕ್ಕಳಿಗೂ ಸರಿಯಾಗಿ ಊಟ ನೀಡುತ್ತಿರಲಿಲ್ಲ ಹಾಗೂ ಚೆನ್ನಾಗಿ ನೋಡಿಕೊಳ್ಳುತ್ತಿರಲಿಲ್ಲ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ನೀವು ಬೈಕ್ ನಲ್ಲಿ ಹೋಗುವಾಗ ಅಕ್ಕ ಪಕ್ಕದವರು ನಿಮ್ಮ ಅಕ್ರಮ ಸಂಬಂಧದ ಬಗ್ಗೆ ಗೊತ್ತಿತ್ತು ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ನಿಮ್ಮ ಅಕ್ಕಪಕ್ಕದ ಮನೆಯವರನ್ನು ಕರೆಯಿಸಿ ಸಾಕ್ಷಿ ಹೇಳಿಸಲು ನಿಮಗೆ ಯಾವುದೇ ತೊಂದರೆ ಇರುವುದಿಲ್ಲವಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸದರಿ ದೊಡ್ಡ ಹನುಮಯ್ಯ ನವರ ಜೊತೆ ಅಕ್ರಮ ಸಂಬಂಧ ಇರುವ ಬಗ್ಗೆ ನಿಮಗೆ ಗೊತ್ತಿದ್ದರು ಜೀವನಾಂಶ ಪಡೆಯಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರೀ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ನಿಮ್ಮ ಅಕ್ರಮ ಸಂಬಂಧದ ಬಗ್ಗೆ ನಿಮ್ಮ ಮಕ್ಕಳಿಗೂ ಸಹ ವಿಷಯ ಗೊತ್ತಿತ್ತು ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ನಿಮಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೀರೀ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನೀವು ಹಾಗೂ ಸದರಿ ದೊಡ್ಡ ಹನುಮಯ್ಯ ನವರು ಫೋನ್ ನಲ್ಲಿ ಮಾತನಾಡುತ್ತಿದ್ದೀರಿ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ರಾಗಿಯನ್ನು ಕಳ್ಳತನ ಮಾಡಿ ಸದರಿ ಚೀಲಕ್ಕೆ ಮರಳನ್ನು ತುಂಬಿ ಹಿಡುತ್ತಿದ್ದೀರೀ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. 2018 ರಲ್ಲಿ ಮಾಗಡಿಯ ಕಲ್ಯ ಗೇಟ್ ಬಳಿ ಸಾಕಷ್ಟು ಚಿಕನ್ ಹಾಗೂ ಮಟನ್ ಅಂಗಡಿಗಳು ಇದ್ದವು ಎಂದರೆ ಸಾಕ್ಷಿಯು ಈಗಲೂ ಹಾಗೆಯೇ

ಇವೆ ಎಂದು ನುಡಿಯುತ್ತಾರೆ. ಸದರಿ ಚಿಕನ್ ಅಂಗಡಿಯನ್ನು ರೂ. 50,000/- ಆದಾಯ ಇರುತ್ತದೆ ನಿಮ್ಮ ಅರ್ಜಿಯಲ್ಲಿ ಹಾಗೂ ಮುಖ್ಯ ವಿಚಾರಣೆ ಯ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೀರೀ ಎಂದರೆ ಸಾಕ್ಷಿಯು ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ಆ ರೀತಿ ಬರೆಸಿರುವುದಿಲ್ಲ ಎಂದರೆ ಸಾಕ್ಷಿಯು ಬರೆಸಿರುತ್ತೇನೆ ಎಂದು ನುಡಿಯುತ್ತಾರೆ.

ನಿಮ್ಮ ಯಜಮಾನರು 2010 ರಿಂದ ಇಲ್ಲಿಯವರೆಗೂ ದಿನಾಲೂ ಸದರಿ ಚಿಕನ್ ಶಾಪ್ ನಲ್ಲಿ ಕೆಲಸ ಮಾಡುವುದು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ಚಿಕನ್ ಶಾಪ್ ಬಂದ ಆದಾಯದಿಂದ ಜೀವನ ಮಾಡುವುದು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರಿದು ಅವರ ಜಮೀನಿನಲ್ಲಿ ಆದಾಯ ಬರುತ್ತದೆ ಎಂದು ನುಡಿಯುತ್ತಾರೆ. ಸದರಿ ಚಿಕನ್ ಶಾಪ್ ಚಿಕ್ಕದಾಗಿ ಇರುತ್ತದೆ ಎಂದರೆ ಸಾಕ್ಷಿಯು ಇಲ್ಲ ದೊಡ್ಡದಾಗಿ ಇರುತ್ತದೆ ಎಂದು ನುಡಿಯುತ್ತಾರೆ. ಬೇವಿನ ಮರ ಹಾಗೂ ಮಾವಿನ ಮರ ಇರುತ್ತದೆ ಎಂದು ಅರ್ಜಿಯಲ್ಲಿ ಹಾಗೂ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೀರಾ ಎಂದರೆ ಸಾಕಿಯು ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ಅ ರೀತಿ ಬರೆಸಿರುವುದಿಲ್ಲ ಎಂದರೆ ಸಾಕ್ಷಿಯು ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ಅಲ್ಲಿ ವ್ಯಾಪಾರದ ಕಾಂಪಿಟೇಷನ್ ಇರುವುದರಿಂದ ಅಷ್ಟು ಆದಾಯ ಬರುವುದಿಲ್ಲ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಎದುರುದಾರರ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಾಕಾಶ ನೀಡಿ ಮುಂದೂಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ